**ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಾವೇರಿ.**

**ಸಿ.ಸಿ.ನಂ.36/2022**

| | | | |
|---|---|---|---|
| ಸಾಕ್ಷಿದಾರರ ಹೆಸರು | ಪುಟ್ಟಪ್ಪ ದಂಡಪ್ಪನವರ | ಸಿಡಬ್ಲ್ಯೂ | 6 |
| ತಂದೆ ಹೆಸರು | ಅಡಿವೆಪ್ಪ | ಪಿಡಬ್ಲ್ಯೂ | 3 |
| ವಯಸ್ಸು | 46 ವರ್ಷ | | |
| ಉದ್ಯೋಗ | ಕೃಷಿ | | |
| ವಾಸಸ್ಥಳ | ಹೊಸಮೇಲ್ಮುರಿ | | |

**ದಿಃ 27.03.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಹಿ.ಸ.ಸ.ಅಭಿಯೋಜಕರಿಂದ.**

1). ನನಗೆ ಚಾ.ಸಾ-1,5,12 ಮತ್ತು 13 ಇವರ ಪರಿಚಯ ಇರುತ್ತದೆ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿ ಇರುವ ಸಹಿ ತನ್ನದೇ ಇರುತ್ತದೆ ಎಂದು ಗುರುತಿಸಿದ್ದರಿಂದ ಸದರಿ ದಾಖಲಾತಿಯು ಘಟನಾ ಸ್ಥಳದ ಪಂಚನಾಮೆಯಾಗಿದ್ದು ಅದನ್ನು ಈಗಾಗಲೇ ನಿ.ಪಿ-4 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ-4(ಬಿ) ಎಂದು ಗುರುತಿಸಲಾಯಿತು. ಕಚ್ಚಾ ನಕಾಶೆಯನ್ನು ಈಗಾಗಲೇ ನಿ.ಪಿ-5 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-5(ಬಿ) ಎಂದು ಗುರುತಿಸಲಾಯಿತು. ಅದೇ ರೀತಿ ಸಾಕ್ಷಿಗೆ ಎರಡು ಫೋಟೋಗಳನ್ನು ತೋರಿಸಲಾಗಿ, ಅದರಲ್ಲಿ ತಾನು ಇರುತ್ತೇನೆ ಎಂದು ಒಪ್ಪಿಕೊಂಡಿದ್ದರಿಂದ ಸದರಿ ಎರಡು ಫೋಟೋಗಳನ್ನು ಆರೋಪಿ ಪರ ವಕೀಲರ ತಕರಾರಿಗೊಳಪಡಿಸಿ ನಿ.ಪಿ-6 ಮತ್ತು 7 ಎಂದು ಗುರುತಿಸಲಾಯಿತು. ಸದರಿ ಎರಡು ಫೋಟೋಗಳನ್ನು ಚೆನ್ನಬಸಪ್ಪ ರಾಗಿ ಇವರ ಹೊಲದ ಹತ್ತಿರ ತೆಗೆದಿರುತ್ತಾರೆ. ನಿ.ಪಿ-4 ಮತ್ತು 5 ದಾಖಲಾತಿಗಳಲ್ಲಿ ಏನೆಲ್ಲ ಸಂಗತಿಗಳನ್ನು ಬರೆದಿರುತ್ತಾರೆ ಎಂದು ನನಗೆ ಗೊತ್ತಿರುವದಿಲ್ಲ. ನಿ.ಪಿ-4 ದಾಖಲಾತಿಯನ್ನು ಬರೆಯುವಾಗ ನನ್ನ ಜೊತೆ ಚಾ.ಸಾ-5 ಇವರು ಸಹ ಅದಕ್ಕೆ ಸಹಿ ಮಾಡಿರುತ್ತಾರೆ. ನಿ.ಪಿ-4 ದಾಖಲಾತಿಗೆ ನಾನು ಎಷ್ಟು ವರ್ಷಗಳ ಹಿಂದೆ ಸಹಿ ಮಾಡಿದ್ದೇನೆ ಎಂದು

ಸಿ.ಡಬ್ಲೂ-6, ಪಿ.ಡಬ್ಲೂ-3

ನನಗೆ ನೆನಪಿರುವದಿಲ್ಲ, ಆದರೆ ಅಂದಾಜು 4 ವರ್ಷಗಳ ಹಿಂದೆ ಸಹಿ ಮಾಡಿರಬಹುದು. ನಿ.ಪಿ-6 ಮತ್ತು 7 ಫೋಟೋಗಳಲ್ಲಿ ನನ್ನನ್ನು ಹೊರತುಪಡಿಸಿ ಚಾ.ಸಾ-6 ಮತ್ತು 13 ಇರುತ್ತಾರೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದರಿಂದ, ಪರಿಶೀಲಿಸಿ ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ ಹಿ.ಸ.ಸ.ಅಭಿಯೋಜಕರಿಂದ.**

2) ನಾನು ಅಪಘಾತವಾದ ಸ್ಥಳದಲ್ಲಿ ಚಾ.ಸಾ-3 ಇವರು ತೋರಿಸಿದ ಸ್ಥಳದಲ್ಲಿ ಬರೆದಂತಹ ನಿ.ಪಿ-4 ಘಟನಾ ಸ್ಥಳದ ಪಂಚನಾಮೆಗೆ ನಾನು ಮತ್ತು ಚಾ.ಸಾ-5 ಇಬ್ಬರೂ ಕೂಡಿ ಸಹಿ ಮಾಡಿರುತ್ತೇವೆ ಅಂದರೆ ಸರಿಯಲ್ಲ. ನನಗೆ ನಿ.ಪಿ-4 ರಿಂದ 7 ದಾಖಲಾತಿಗಳಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ಗೊತ್ತಿರುವದಿಲ್ಲ ಮತ್ತು ನಿ.ಪಿ-3 ಮತ್ತು 4 ಫೋಟೋ ಎಲ್ಲಿ ತೆಗೆದಿರುತ್ತಾರೆ ಎಂದು ಗೊತ್ತಿರುವದಿಲ್ಲ. ನನಗೆ ನಿ.ಪಿ-4 ರಿಂದ 7 ದಾಖಲಾತಿಗಳ ಕುರಿತಾಗಿ ಸಂಪೂರ್ಣ ಮಾಹಿತಿ ಇದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರು ಪಾಟೀ ಸವಾಲು ಇರುವದಿಲ್ಲ ಎಂದು ತಿಳಿಸಿರುತ್ತಾರೆ.**

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೇ. ಸರಿ ಇದೆ.
ಎಂದು ಒಪ್ಪಿರುತ್ತಾರೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು
ಹಾವೇರಿ.